**ಪ್ರಮಾಣ ವಚನ ಬೋಧಿಸಿದ ದಿನಾಂಕ: 24.02.2026.**

**ಮುಂದುವರೆದ ಪಾಟೀಸವಾಲು ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಶ್ರೀ. ಎಸ್.ಎನ್.ಎಲ್. ವಕೀಲರಿಂದ ಆರೋಪಿ ಪರ ವಕೀಲರಿಂದ :-**

3) ಗಲಾಟೆಯು ಸಂಜೆ 5.30 ಶುರುವಾಯಿತು. ಗಲಾಟೆ 15 ನಿಮಿಷಗಳ ಕಾಲ ನಡೆಯಿತು. ಎಷ್ಟು ಜನ ಸೇರಿದ್ದರು ಎಂದು ಪ್ರಶ್ನಿಸಲಾಗಿ ಸಾಕ್ಷಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಸಮಯದಲ್ಲಿ ಯಾರು ಯಾರು ಇದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಸದರಿ ದಿನಂದು ನಾನು ಸಂಜೆ 4.30 ಯಿಂದ 8 ಗಂಟೆಯವರೆಗೆ ಕೆಲಸ ಮಾಡಿರುತ್ತೇನೆ. ನಿಪಿ 12 ರಲ್ಲಿ ಅಶೋಕ ಮತ್ತು ಶರತ್ ಗಲಾಟೆ ಬಿಡಿಸಿರುತ್ತೇನೆ ಎಂದು ಹೇಳಿರುವುದು ಸರಿ. ವೈದ್ಯರ ಹತ್ತಿರ ಹೋದಾಗ ಘಟನೆ ಹೇಗಾಯಿತು ಮತ್ತು ಗಾಯಗಳು ಹೇಗಾಯಿತು ಎಂದು ಹೇಳಿರುತ್ತೇನೆ. ಆರೋಪಿತರು ನನ್ನ ಕರ್ತವ್ಯಕ್ಕೆ ಅಡ್ಡಿ ಪಡಿಸಿಲ್ಲ ಎನ್ನುವುದು ಸರಿಯಲ್ಲ. ರಸ್ತೆಯ ಎಡಭಾಗದಲ್ಲಿ ವಾಹನ ನಿಲ್ಲಿಸಿದ್ದರು. ಮೂಡ್ಲಿಗಿರಿಗೌಡ ನನ್ನ ಜೊತೆಯಲ್ಲಿಯೇ ಇದ್ದರು. ಸಂಜೆ 5.30 ಗೆ ದೂರನ್ನು ನೀಡಿರುತ್ತೇನೆ. ನಾನು ಬೇಲೂರು ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ನನ್ನ ರಕ್ತಗಾಯವಾಗಿತ್ತು. ಬಟ್ಟೆಗೆ ರಕ್ತವಾಗಿರಲಿಲ್ಲ. ಆರೋಪಿತರು ಕರ್ತವ್ಯಕ್ಕೆ ಅಡ್ಡಿ ಪಡಿಸದೇ ಇದ್ದರು ಮತ್ತು ಗಲಾಟೆ ಮಾಡದೇ ಇದ್ದರು ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ**.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಓ

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಬೇಲೂರು